

ಕಳೆದ ವಾರದ ‘ಚೆನ್ನುಡಿ’
‘ಬ್ಯಾಡದು... ಹೇಳದು’ ಕೇಳಿ...
ರಶ್ಮಿ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



ವಿದ್ಯಾನಗರ ಸರ್ಕಲ್

ಘಟಪ್ರಭೆ ಹರಿತಾಳ. ಈ ಮೂರು ನದಿಯಿಂದ ನಮ್ಮೂರ ಇಂದು ಇಡೀ ರಾಜ್ಯಾದಾಗ ಕಬ್ಬು ಬೆಳಿಯೋ ಅಗ್ರ ಜಿಲ್ಲೆಯೊಳಗ ಒಂದ ಆಗೇತಿ. ಯಾವಾಗ ಊರ ಮುಳಗಡಿ ಆಗಾಕ ಹತ್ತಿ ಅವಾಗಿಂದ ಇಡೀ ಊರ ತುಂಬ ಟಂಟಂದ ಸದ್ದ ಕೇಳತೈತಿ. ಹಳೇ ಬಾಗಲಕೋಟದಿಂದ ನವನಗರಕ, ನವನಗರದಿಂದ ವಿದ್ಯಾಗಿರಿಗೆ ಜನರನ್ನ ತುಂಬಿಸಿಕೊಂಡ ಸರಿರಾತ್ರಿತನ ಓಡಾಡತಾವ. ಜೊತಿಗಿ ಡಂಡಂ ಅಂತ ಟಂಟಂದಾಗ ಸ್ಪೀಕರ್‌ಗಳ ಸಪ್ಪಳಕ ಪ್ರಯಾಣಿಕರ ಎದಿನೂ ಬಡಕೋತೈತಿ. ಅಷ್ಟ ಸೌಂಡ್ ಮಾಡ್ತಾವ. ಈಗಂತೂ ಸಕ್ರಿ ಫ್ಯಾಕ್ಟ್ರಿ ಬ್ಯಾಳ ಆಗಿದರಿಂದ ಟ್ರಾಕ್ಟರ್‌ಗೊಳ ಎರಡೆರೆಡ ಟ್ರಾಲಿ ಕಬ್ಬು ತುಂಬಕೊಂಡ ಹೋಗು ಮುಂದ ಕೇಳಬೇಕ. ಮುಂದ ದೊಡ್ಡ ಸೌಂಡಿನ್ಯಾಗ ಈಗೀನ ಕವಿಗೊಳ ಬರದಿರೋ ಹಾಡಗಳನ ಹಚ್ಚಗೊಂಡ ರಸ್ತಾದಾಗಿನ ಎಲ್ರೂ ಹೌಹಾರು ಹಂಗ ಸಪ್ಪಳ ಮಾಡ್ಕೊತ ಹೋಗ್ತಾರ. ಅಲ್ದ ಹಿಂದಿನ ಗಾಡಿಯಾರು, ಬೈಕ್ ಸವಾರರ ಎಷ್ಟ ಹಾರ್ನ ಹಾಕಿದರೂ ಅವ್ರಿಗೆ ಕೇಳಿದ್ರ ನೋಡ್ರಿ.

ಇನ್ನ ನಿಮಗ ಏನಾರ ಛಲೋ ಎತ್ತು, ಹೋರಿ, ಆಡು, ಕುರಿ, ಕೋಳಿ ಬೇಕಾದ್ರ ಮಂಗಳ್ವಾರ ನಡಿಯೋ ಕೆರೂರ ಸಂತಿಗಿ ಬರಬೇಕ. ಅಲ್ಲಿ ಎಷ್ಟ ದೂರದ ಊರಿಂದ ರೈತ್ರು ತಮ್ಮ ದನಕರಗಳನ್ನ ಮಾರಾಕ ತಂದಿರತಾರ. ಹಂಗ ತಮಗ ಬೇಕಾದ ದನಕರಗಳನ್ನ ಕೊಂಡ್ಕೊಂಡ ಹೋಗ್ತಾರ. ಅಷ್ಟ ದೊಡ್ಡ ದನದ ಸಂತಿ ಅಕ್ಕೈತಿ. ಹಂಗ ವರ್ಷಕೊಮ್ಮಿ ಬಾಗಲಕೋಟಿ ಬಸವಣ್ಣನ ಜಾತ್ರಿ ವ್ಯಾಳೆದಾಗೂ ದೊಡ್ಡ ದನದ ಸಂತಿ ಆಗತೈತಿ. ಆ ವ್ಯಾಳೆದಾಗ ರೈತ್ರ ಬಂದ್ರ ತಮಗ ಬೇಕಾದ ದನಕರ ಕೊಂಡಕೊಬೌದು.

ಹಂಗ ಬಾಗಲಕೋಟಿ ಹತ್ರನ ಮುಚಖಂಡಿ ಅನ್ನೂ ಊರ ಐತಿ. ಅಲ್ಲಿರೋ ಕೆರಿಗೆ ಬ್ರಿಟಿಷರ ಕಾಲದಾಗ ಕ್ರಿ.ಶ. 1882ನೇ ಇಸ್ವಿಯೊಳಗ ಕಟ್ಟಿಸಿದ ದೊಡ್ಡ ಚೆಕ್ ಡ್ಯಾಂ ಐತಿ. ಈಗ ಅದಕ ಆಗಾಗ ಘಟಪ್ರಭಾ ನದಿಯಿಂದ ನೀರ ತುಂಬಸ್ತಾರ. ಮತ್ತ ಅದರ ಮುಂದ ಇತ್ತಿತ್ತಲಾಗ ಒಂದ ಚಂದಾನ ಗಾರ್ಡನ್ ಮಾಡ್ಯಾರ.

ಹಿಂದಕ ಹಳೇ ಬಾಗಲಕೋಟದಾಗ ನಗರವನ ಅಂತ ಇತ್ತ. ಅದು 1925 ಇಸ್ವಿಯೊಳಗ ಕಟ್ಟಿಸಿದ್ದು. ಅಂದ್ರ ಈಗ ಅದಕ 100 ವರ್ಷ ಆತ. ಆದ್ರ ಹಳೆ ಬಾಗಲಕೋಟ ಮುಳಗಡಿ ಆಗಿದ್ದಕ ಅಲ್ಲಿ ಕಲ್ಲಗಳನ್ನ ಕಿತ್ಕೊಂಡ ಬಂದ ನವನಗರದಾಗ ಅವನೆಲ್ಲ ಜೋಡಿಸಿ ಮಹಾದ್ವಾರದ ತರ ಮಾಡಿ ಹೊಸ ಗಾರ್ಡನ್ ಕಣ್ಣ ಕುಕ್ಕುವಂಗ ಮಾಡ್ಯಾರ. ಅದನ ನೋಡಾಕ ಖುಷಿ ಅಕ್ಕೈತಿ. ನವನಗರದಾಗ ದೊಡ್ಡ ದೊಡ್ಡ ರಸ್ತಾ, ಚಂದಾನ ರಸ್ತಾ ದೀಪಗಳು ಊರ ಸೌಂದರ್ಯನ ಹೆಚ್ಚ ಮಾಡ್ಯಾವ. ಜೊತಿಗಿ ಬಾಗಲಕೋಟ ಪೂರ್ವ ದಿಕ್ಕಿನ್ಯಾಗ ಎನ್. ಎಚ್. 367ರೊಳಗ ಶಿರೂರು ಅಗಸಿ, ಪಶ್ಚಿಮಕ ಬೈ ಪಾಸ್ ರಸ್ತಾದಾಗ ಎನ್.ಎಚ್ 218ಕ ಹೊಂದಕೊಂಡಾಂಗ ಒಂದ ದೊಡ್ಡ ಕಮಾನ ಊರಿಗೆ ಬರೋ ಮಂದಿನ ಸ್ವಾಗತ ಮಾಡ್ತಾವು.

ನವನಗರದಾಗ ಸಾಕಷ್ಟ ಮನಿ ನಿರ್ಮಾಣ ಆಗ್ಯಾವ. ಇಲ್ಲಿತಂಕ ಅಂಗಡಿಗೊಳ ನಿರ್ಮಾಣ ಕಮ್ಮಿ ಇತ್ತ. ಯಾಕಂದ್ರ ಹಳೇ ಊರಾಗ ಇನ್ನೂ ಬಹಳಷ್ಟ ಅಂಗಡಿ ಉಳಿದಾವ. ವಲ್ಲಭಬಾಯಿ ಚೌಕದ ಸುತ್ತಮುತ್ತ ಹಳಿ ಬಜಾರ್ ಹಂಗ ಉಳಿದೈತಿ. ಜೊತಿಗಿ ಒಂದ ಕಡೆ ಹಳೇ ಕೃಷ್ಣ ಟಾಕೀಜತನಕ, ಮತ್ತೊಂದ ಕಡೆ ಸ್ಟೇಷನ್ ರೋಡ ಹೊಸ ಪೋಸ್ಟಾಫೀಸಿನತನ ಅಂಗಡಿಗೊಳ ಅದಾವ. ಈಗೀಗ ನವನಗರದಾಗ ಅಂಗಡಿ ಬಹಳಷ್ಟ ಪ್ರಾರಂಭ ಆಗ್ಯಾವ. ನವನಗರಗಿಂತ ಮೊದಲ ಸುರುವಾದ ವಿದ್ಯಾಗಿರಿಯಾಗ ಬ್ಯಾಳ ಅಂಗಡಿ ತಲಿಯೆತ್ತಿ ನಿಂತಾವ. ಹಿಂಗಾಗಿ ಕ್ವಾಟಿ ಅನ್ನೂದು ಮೂರ ಕಡೆ ಹರದ ಹಂಚಿ ಹೋದಾಂಗ ಆಗೈತಿ. ನವನಗರದ ಮತ್ತೊಂದ ವೈಶಿಷ್ಟ್ಯ ಏನಂದ್ರ ಇಲ್ಲಿ ಇಷ್ಟೊಂದ ಸೆಕ್ಟರ್ ಇದ್ರೂ ಯಾವದಕ್ಕೂ ಅಧಿಕೃತವಾಗಿ ಹೆಸರ ಇಟ್ಟಿಲ್ಲ. ಯಾವದ ರಸ್ತಾಕ್ಕೂ ಹೆಸರೂ ಇಟ್ಟಿಲ್ಲ. ಅಷ್ಟ ಯಾಕ ಯಾವ ಸರ್ಕಲ್‌ಕ್ಕೂ ಯಾರದೂ ಹೆಸರಿಟ್ಟಿಲ್ಲ. ಚಂಡೀಗಢ ಮಾದರಿಯೊಳಗ ಸೆಕ್ಟರಕ, ರಸ್ತಾಕ ಬರೀ ನಂಬರ್ ಕೊಟ್ಟಾರ. ಆದ್ರೂ ಜನ ಮಾತ್ರ ಸರ್ಕಾರಿ ದವಾಖಾನಿ ಸರ್ಕಲ್, ಮುನ್ಸಿಪಾಲ್ಟಿ ಸರ್ಕಲ್, ಎಲ್ಲೈಸಿ ಸರ್ಕಲ್ ಅಂತನ ಕರಿತಾರ. ಅವ್ರ ಹೆಸರ ಇಟ್ಟಿಲ್ಲ, ಇವ್ರ ಹೆಸರ ಇಟ್ಟಿಲ್ಲ ಅನ್ನೂ ಫಜೀತಿ ಇಲ್ಲ ನೋಡ್ರಿ. ಆ ಮೂರ್ತಿ ಒಡದ್ರ, ಈ ಮೂರ್ತಿ ಒಡದ್ರ ಅನ್ನೋ ಪ್ರಶ್ನಾನ ಇಲ್ಲ. ಒಂದ ರೀತಿ ಸರ್ವ ಜನಾಂಗಕೂ ಶಾಂತಿಯ ತ್ವಾಟ, ನಮ್ಮ ಬಾಗಲಕೋಟ.



ಡ್ಯಾಮ್ ಕಮ್ ಬ್ರಿಡ್ಜ್ ಎದುರು ಈಚೆಗೆ ನಿರ್ಮಿಸಿರುವ ಉದ್ಯಾನವನ